**ಡಿಡಬ್ಲ್ಯೂ-2**

**ದಿನಾಂಕಃ 14-11-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ-**

ನಾನು ವಾದಿಯ ಜೊತೆ ಚೀಟಿ ವ್ಯವಹಾರ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆಗಳು ಇಲ್ಲ. ಸದರಿ ಚೀಟಿ ವ್ಯವಹಾರದಲ್ಲಿ 25 ಜನ ಸದಸ್ಯರು ಇದ್ದರು ಎಂದು ಹೇಳಿದ್ದು ಅವರ ಹೆಸರು ಗೊತ್ತಿಲ್ಲ. ನಾನು ಒಂದೇ ಬಾರಿ ವಾದಿಯ ಜೊತೆ ಚೀಟಿ ವ್ಯವಹಾರ ಮಾಡಿದ್ದೆ. ನಾನು ವಾದಿಗೆ 4 ಚೆಕ್ ಗಳನ್ನು ಕೊಟ್ಟಿದ್ದೆ ಎಂದು ಹೇಳಿದ್ದು ಯಾವ ಯಾವ ತಾರೀಖಿನಂದು ಕೊಟ್ಟಿದ್ದೆ ಎಂದು ಹೇಳಲು ಬರುವುದಿಲ್ಲ. ಚೀಟಿ ಹಣ ನನ್ನ ಮನೆಗೆ ಬಂದು ಕೊಟ್ಟಿದ್ದು ಆ ಸಮಯದಲ್ಲಿ ನನ್ನ ಮಗಳು ಪ್ರತಿವಾದಿ ಕೂಡ ಇದ್ದಳು. ಸದರಿ ಹಣವನ್ನು 2014 ನೇ ಇಸವಿಯಲ್ಲಿ ಹಣ ಕೊಟ್ಟಿದ್ದು ತಾರೀಖು ನೆನಪಿಲ್ಲ. ನಾನು 10 ನೇ ಚೀಟಿಯಲ್ಲಿ ಹಣ ಪಡೆದಿದ್ದೆ. ಸದರಿ ಹಣ ಪಡೆಯುವ 4-5 ವರ್ಷಗಳ ಮುಂಚೆಯಿಂದ ಬ್ಯಾಂಕ್ ನ ವ್ಯವಹಾರವನ್ನು ಮಾಡುತ್ತಿದ್ದೆ. ಚೆಕ್ ಮೂಲಕ ನಾನು ಹಣ ಪಡೆಯುವುದಾಗಲೀ, ಕೊಡುವುದಾಗಲೀ ಮಾಡಿಲ್ಲ. ಚೆಕ್ ಕೊಡುವ ಸಮಯದಲ್ಲಿ ಪ್ರತಿವಾದಿ ಕೂಡ ಇದ್ದರು. ಪ್ರತಿವಾದಿ ಗೃಹಿಣಿ ಇದ್ದು ಯಾವುದೇ ಕೆಲಸ ಮಾಡುತ್ತಿಲ್ಲ. ಖಾಲಿ ಚೆಕ್ ಗಳನ್ನು ಕೊಡುವುದು ಸರಿಯಲ್ಲ ಅದು ಅಪಾಯಕಾರಿ ಎಂದು ಪ್ರತಿವಾದಿ ಆಗ ನನಗೆ ಹೇಳಲಿಲ್ಲ. ಹಣ ಕೊಡುವಾಗ ವಾದಿ ಸಾಕ್ಷಿ ಎಂದು ನನ್ನ ಮತ್ತು ಪ್ರತಿವಾದಿಯ ಸಹಿಯನ್ನು ಪಡೆದಿರುತ್ತಾರೆ. ಹಣ ಕೊಡುತ್ತಿರುವುದು ನನ್ನ ತಾಯಿಗೆ ನಾನೇಕೆ ಸಹಿ ಮಾಡಲಿ ಎಂದು ನನ್ನ ಮಗಳು ತಕರಾರು ಮಾಡಿಲ್ಲ. ಚೀಟಿ ವ್ಯವಹಾರ ಅಂತ ನಾನು ಬಾಯಿ ಮಾತಿನಿಂದ ಹೇಳಿದ್ದು ಆ ಬಗ್ಗೆ ಯಾವುದೇ ಸಾಕ್ಷಿ ಆಧಾರಗಳು ಇಲ್ಲ.

ನನ್ನ ವಿರುದ್ಧ ಕೂಡ ಬೇರೆ ನ್ಯಾಯಾಲಯದಲ್ಲಿ ವಾದಿ ಕೇಸನ್ನು ಹಾಕಿರುತ್ತಾರೆ. ಈ ರೀತಿ ನನ್ನ ಮತ್ತು ನನ್ನ ಮಗಳ ಮೇಲೆ ವಾದಿ ಕೇಸು ಹಾಕಿ 5 ವರ್ಷಗಳು ಆಗಿವೆ ಎಂದರೆ ಸರಿ. ನಾನು 4 ಚೆಕ್ ಗಳನ್ನು ಕೊಟ್ಟಿದ್ದೇನೆಂದು ಹೇಳಿದ್ದು ಅವುಗಳ ಆಧಾರದ ಮೇಲೆ ವಾದಿ ನಮ್ಮ ವಿರುದ್ಧ ಕೇಸನ್ನು ಹಾಕಿಲ್ಲ. ಅದೇ ರೀತಿ ಆ 4 ಚೆಕ್ ಗಳ ಆಧಾರದ ಮೇಲೆ ಬೇರೆ ಯಾರು ಕೇಸುಗಳನ್ನು ಹಾಕಿಲ್ಲ. ನಾನು 4 ಚೆಕ್ ಗಳನ್ನು ವಾದಿ ಪಡೆದ

ಬಗ್ಗೆ ಪೋಲೀಸರಿಗೆ ದೂರು ಸಲ್ಲಿಸಿರುತ್ತೇನೆ. ಆ ಬಗ್ಗೆ ಪೋಲೀಸರು ಸ್ವೀಕೃತಿ ಪತ್ರ ಕೊಟ್ಟಿರುತ್ತಾರೆ. ಅದನ್ನು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ಪೋಲೀಸರು ಏನನ್ನೂ ಹೇಳಿಲ್ಲ ಆ ಕಾರಣ ನಾನು ಸಿವಿಲ್ ಕೇಸನ್ನು ಹಾಕಿರುತ್ತೇನೆ. ಆ 4 ಚೆಕ್ ಗಳನ್ನು ಕೊಟ್ಟ ಬಗ್ಗೆ ಚೆಕ್ ಬುಕ್ ನ ಕೌಂಟರ್ ಫೈಲ್ ನಲ್ಲಿ ಬರೆದಿಲ್ಲ. 2017 ನೇ ಸಾಲಿನಲ್ಲಿ ವಾದಿ ಹಣಕಾಸಿನ ವ್ಯವಹಾರದಲ್ಲಿ ಸಾಕಷ್ಟು ಅನುಕೂಲಸ್ಥರು ಎಂದರೆ ಸರಿ. 2017 ನೇ ಇಸವಿಯಲ್ಲಿ ಪ್ರತಿವಾದಿ ಚಿಕ್ಕನಾಯಕನಹಳ್ಳಿಯ ಹಳ್ಳಿಕೆರೆಯಲ್ಲಿ ವಾಸವಿರಲಿಲ್ಲ. ಬೆಂಗಳೂರಿನಲ್ಲಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.ವಾದಿ ಯಾವತ್ತೂ ಚೀಟಿ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಿ:15-10-2017 ರಂದು ವಾದಿ ಬಳಿಯಿಂದ 6 ಲಕ್ಷ ಹಣ ಸಾಲ ಪಡೆದಿದ್ದು ಆ ಬಗ್ಗೆ ಪ್ರನೋಟ್ ನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ನನ್ನ ಮಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ**. 14-11-2025.**

<u>ಡಿಡಬ್ಲ್ಯೂ-**3**</u>

<u>ದಿನಾಂಕಃ **14-11-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲು ಶ್ರೀ ಕೆ.ಎ.ಆರ್. ವಕೀಲರಿಂದಃ-</u>

ಪ್ರತಿವಾದಿ ಸವಿತ ನನ್ನ ಹೆಂಡತಿ. ವಾದಿ ಚೀಟಿ ವ್ಯವಹಾರ ನಡೆಸುತ್ತಿದ್ದಾರೆ ಎಂದು ತೋರಿಸಲು ದಾಖಲೆಗಳು ಇಲ್ಲ. ನನ್ನ ಎದುರಿಗೆ ಡಿ.ಡಬ್ಲ್ಯೂ-2 ರವರು ವಾದಿಗೆ 4 ಚೆಕ್ ಗಳನ್ನು ಕೊಟ್ಟಿಲ್ಲ. ನನಗೆ ವೈಯಕ್ತಿಕವಾಗಿ ಚೀಟಿ ವ್ಯವಹಾರದ ಬಗ್ಗೆ ಗೊತ್ತಿಲ್ಲ. ಡಿ.ಡಬ್ಲ್ಯೂ-2 ರವರು ಹೇಳಿದ್ದರಿಂದ ಗೊತ್ತಾಯಿತು.

ಪ್ರತಿವಾದಿಯ ವಕೀಲರು ಹೇಳಿದ್ದರಿಂದ ಸಿ.ಡಿ.ಯನ್ನು ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮೊಬೈಲ್ ನಂಬರ್ ನನಗೆ ಸೇರಿದ್ದು. ಯಾವತ್ತೂ ವಾದಿ ನನ್ನ ಫೋನ್ ಗೆ ಕರೆ ಮಾಡಿಲ್ಲ. ಆದರೆ ನನ್ನ ಮೊಬೈಲ್ ನಿಂದ ವಾದಿಯ ಮೊಬೈಲ್ ಗೆ ಕರೆ ಮಾಡಿದ್ದೆ. ನಾನು ಮೊಬೈಲ್ ಸೆಟ್ ಬದಲಾಯಿಸಿದ್ದರಿಂದ Cause list ನ್ನು ಹಾಜರುಪಡಿಸಲು ಆಗುವುದಿಲ್ಲ. ನಾನು ಮೊಬೈಲ್ ನಿಂದ ರೆಕಾರ್ಡ್ ಮಾಡಿದಂತಹ ಮೊಬೈಲ್ ನನ್ನ ಬಳಿ ಇದೆ. ಆ ಮೊಬೈಲ್ ನಲ್ಲಿರುವ ಸಿಮ್ ನ್ನು ನಾನು ಬೇರೆ ಮೊಬೈಲ್ ಗೆ ಹಾಕಿಕೊಂಡಿರುತ್ತೇನೆ. ನಾನೇನು ವಾದಿಯ ಜೊತೆ ಹಣಕಾಸಿನ ವ್ಯವಹಾರ ಇಟ್ಟುಕೊಂಡಿಲ್ಲ. ವಾದಿ ನನಗೆ ಸಂಬಂಧಿ ಅಲ್ಲ ಪರಿಚಯ. ವಾದಿ ನಮ್ಮ ಮನೆಗೆ ಬಂದು ಜಗಳ ಮಾಡಿದ್ದರಿಂದ ಆ ಬಗ್ಗೆ ನಾನು ವಿಚಾರಿಸಲು ನಾನು ವಾದಿಗೆ ಫೋನ್ ಮಾಡಿದ್ದೆ. ನಾನು ರೆಕಾರ್ಡ್ ಮಾಡಿದ ದಿನ ತುಮಕೂರಿನಲ್ಲಿದ್ದೆ. ರೆಕಾರ್ಡ್ ಮಾಡಿದ ವಿಚಾರ ಪ್ರತಿವಾದಿಗೆ ಗೊತ್ತು. ವಾದಿಯ ಮೊಬೈಲ್ ಸಂಖ್ಯೆ ನೆನಪಿಲ್ಲ. ಆ ಮೊಬೈಲ್ ಸಂಖ್ಯೆ ವಾದಿಗೆ ಸೇರಿದ್ದು ಎಂದು ತೋರಿಸುವ ದಾಖಲೆ ನನ್ನ ಬಳಿ ಇಲ್ಲ. ಈ ದಾವೆಯನ್ನು ಹಾಕಿದ ಮೇಲೆ ಸುಮಾರು 1 ವರೆ ವರ್ಷದ ಹಿಂದೆ ನನ್ನ ಮೊಬೈಲ್ ನಿಂದ ಸಿ.ಡಿ. ಗೆ ವರ್ಗಾಯಿಸಿರುತ್ತೇನೆ. ನಾನು ಕಂಪ್ಯೂಟರ್ ಅಂಗಡಿಗೆ ಹೋಗಿ ಮೊಬೈಲ್ ನಿಂದ ಸಿ.ಡಿ. ಗೆ ದತ್ತಾಂಶವನ್ನು ವರ್ಗಾವಣೆ ಮಾಡಿರುತ್ತೇನೆ. ಅರಸೀಕೆರೆಯಲ್ಲಿರುವ ಕಂಪ್ಯೂಟರ್ ಸೆಂಟರ್ ನಲ್ಲಿ ಮಾಡಿದ್ದು ಅದರ ಹೆಸರ ಗೊತ್ತಿಲ್ಲ. ಅದರ ಮಾಲೀಕರ ಹೆಸರು ಗೊತ್ತಿಲ್ಲ ಮತ್ತು ಅವರ ಪರಿಚಯ ಇಲ್ಲ. ಯಾವ ಕಂಪ್ಯೂಟರ್ ನಿಂದ ಸಿ.ಡಿ. ಗೆ ವರ್ಗಾವಣೆ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಿಡಿ-1 ರಲ್ಲಿ ಯಾವ ಕಂಪ್ಯೂಟರ್

ನಿಂದ ಸಿ.ಡಿ. ವರ್ಗಾವಣೆ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ನಾನು, ಪ್ರತಿವಾದಿ ಮತ್ತು ಡಿ.ಡಬ್ಲ್ಯೂ-2 ರವರು ಸೇರಿ ಸೃಷ್ಟಿಸಿ ವಾದಿಗೆ ಮೋಸ ಮಾಡಬೇಕೆಂದು ಹಾಜರುಪಡಿಸಿರುತ್ತೇವೆಂದರೆ ಸರಿಯಲ್ಲ. ಈ ಕೇಸಿಗೂ ಮತ್ತು ಸಿ.ಡಿ. ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಹಾಗೂ ಅತ್ತೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **14-11-2025.**